**2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು**

| ಎಸ್ ಸಿ : | **231/22** |
|---|---|

| | | |
|---|---|---|
| ಸಾಕ್ಷಿದಾರರ ಹೆಸರು | **ಶ್ರೀಮತಿ ವಸಂತ** | |
| ಗಂಡನ ಹೆಸರು | **ನಾಗರಾಜು** | ಸಾಕ್ಷಿಗೆ ದಿಃ **18.11.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **47 ವರ್ಷ** | |
| ಉದ್ಯೋಗ | **ಮರದ ಕೆಲಸ** | ಪಿ.ಡಬ್ಲ್ಯೂ **-04** |
| ವಾಸ ಸ್ಥಳ | **ಮೈಸೂರು** | ಸಿ.ಡಬ್ಲ್ಯೂ **-05** |

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–**

ಸುಮಾರು ಒಂದು ವರ್ಷದ ಹಿಂದೆ ಅಕ್ಟೋಬರ್ ತಿಂಗಳಲ್ಲಿ ನಂಜಮ್ಮ ಮೃತಪಟ್ಟಿದ್ದಾರೆ ಎಂದು ನಾನು ಕೆ.ಆರ್.ಆಸ್ಪತ್ರೆಗೆ ಹೋಗಿರುತ್ತೇನೆ. ಮೃತ ನಂಜಮ್ಮ ಇವರ ಶವವನ್ನು ಕೆ.ಆರ್.ಆಸ್ಪತ್ರೆ ಶವಾಗಾರದಲ್ಲಿ ಇದ್ದು, ಪೊಲೀಸರು ಬೆಳಿಗ್ಗೆ 9.45 ಗಂಟೆಯಿಂದ 11.45 ಗಂಟೆಯವರೆಗೆ ನಂಜಮ್ಮ ಇವರ ಶವಾಗಾರದ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ–12 ಎಂದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ–12(ಎ) ಎಂದು ಗುರುತಿಸಲಾಯಿತು. ಮೃತ ನಂಜಮ್ಮ ಇವರ ಬಲಭಾಗದ ಹಣೆಯು ಊದಿಕೊಂಡಿತ್ತು, ಎರಡು ಕಣ್ಣುಗಳು ಊದಿಕೊಂಡಿದ್ದವು, ಬಾಯಲ್ಲಿ ರಕ್ತ ಬರುತ್ತಿತ್ತು. ಬಲಗುತ್ತಿಗೆಯ ಭಾಗದಲ್ಲಿ ರಕ್ತ ಹೆಪ್ಪುಗಟ್ಟಿತ್ತು, ಬಲಗಡೆ ಎದೆಯ ಭಾಗದಲ್ಲಿ ತೆರಚಿದ ಗಾಯ ಇತ್ತು, ಬಲ ಹೆಬ್ಬೆರಳಿಗೆ ಗಾಯಗಳು ಆಗಿದ್ದರ, ಎರಡು ಕಾಲುಗಳಿಗೆ ಗಾಯಗಳು ಆಗಿದ್ದವು. ನಂಜಮ್ಮನ ಶವದ ಪೋಟೋಗಳು ಆಸ್ಪತ್ರೆಯಲ್ಲಿ ತೆಗೆದಿರುತ್ತಾರೆ ಎಂದು ಸಾಕ್ಷಿ ಗುರುತಿಸಿದ್ದು, ಸದರಿ ಪೋಟೋಗಳು ನಿಪಿ–13 ಮತ್ತು ನಿಪಿ–14 ಎಂದು ಗುರುತಿಸಲಾಯಿತು.

ನಂಜಮ್ಮನ ಶವದ ಮೇಲೆ ಇರುವ ಸೀರೆ, ಬೌಸ್, ಲಂಗ್ ಇವುಗಳನ್ನು ಸಾಕ್ಷಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಎಂ.ಓ -3 ರಿಂದ ಎಂ.ಓ -5 ಎಂದು ಗುರುತಿಸಲಾಯಿತು. ಸೊಸೆ ಮತ್ತು ಮೊಮ್ಮಕ್ಕಳು ಹೊಡೆದರಿಂದ ಅವಳು ಮೃತಪಟ್ಟಿರುತ್ತಾಳೆ ಎಂದು ನನಗೆ ಗೊತ್ತಾಗಿರುತ್ತದೆ. ನನ್ನ ಜೊತೆ ಪಂಚನಾಮೆಗೆ ಸೋಮಣ್ಣ, ಮಹದೇವ ಸಹಿ ಮಾಡಿರುತ್ತಾರೆ.

(ಮೂಲ ದಾಖಲೆಗಳು ಮತ್ತು ಮುದ್ದೆಮಾಲುಗಳು S.C No.18/2022 ರಿಂದ ತರಿಸಿಕೊಂಡು ಈ ಕೇಸಿನಲ್ಲಿ ನಿಶಾನೆ ಎಂದು ಗುರುತಿಸಿ ಪುನಃ ಅದೇ ಕೇಸಿಗೆ ರವಾನಿಸಲಾಯಿತು.)

**ಪಾಟೀಸವಾಲು :- ಆರೋಪಿ ಪರ ವಕೀಲರಿಂದಃ-**

ಸಕಾರಣವಿಲ್ಲದೇ ಸಮಯ ಕೇಳಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು